ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 13/12/20

# 15ಕ್ಕೆ ಪರಿಷತ್ ಅಧಿವೇಶನ

## ಕಾರ್ಯದರ್ಶಿಗೆ ಸರ್ಕಾರದ ಪತ್ರ | ಸಭಾಪತಿ ವಿರುದ್ಧ ರಾಜ್ಯಪಾಲರಿಗೆ ದೂರು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 12-12-2020

ವಿಧಾನಪರಿಷತ್ ಅಧಿವೇಶನವನ್ನು ಮಂಗಳವಾರ (ಡಿ.15) ಕರೆಯುವಂತೆ ಕೋರಿ ಪರಿಷತ್ ಕಾರ್ಯದರ್ಶಿಗೆ ರಾಜ್ಯ ಸರ್ಕಾರ ಪ್ರಸ್ತಾವನೆ ಸಲ್ಲಿಸಿದೆ. ಆ ಮೂಲಕ ಸಭಾಪತಿ ಕೆ.ಪ್ರತಾಪಚಂದ್ರ ಶೆಟ್ಟಿ ವಿರುದ್ಧದ ಅವಿಶ್ವಾಸ ಪ್ರಸ್ತಾಪಕ್ಕೆ ನಿರ್ಣಾಯಕ ಅಂತ್ಯ ಕಾಣಿಸಲು ಬಿಜೆಪಿ ನಿರ್ಧರಿಸಿದೆ. ಮಂಗಳವಾರ ಒಂದು ದಿನದಮಟ್ಟಿಗೆ ಅಧಿವೇಶನ ಕರೆಯುವಂತೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಪ್ರಸ್ತಾವನೆ ಸಲ್ಲಿಸಿರುವುದನ್ನು ವಿಧಾನಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮಿ 'ವಿಜಯವಾಣಿ'ಗೆ ಖಚಿತ ಪಡಿಸಿದರು. ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಪರಿಷತ್ ಅಧಿವೇಶನವನ್ನು ಗುರುವಾರ ಅನಿರ್ದಿಷ್ಟಾವಧಿಗೆ ಮುಂದೂಡಿ ದ್ದರು. ಬೆನ್ನಹಿಂದೆಯೇ ಆಡಳಿತಾರೂಢ ಬಿಜೆಪಿ ಪಟ್ಟುಬಿಡದೆ ಒಂದು ದಿನದ ಅಧಿವೇಶನ ನಡೆಸಲು ಮುಂದಾಗಿದೆ.

**'ಅವಿಶ್ವಾಸ'ದ ಗದ್ದಲ:** ಕಲಾಪದ ವೇಳೆ ಸಭಾಪತಿ ವಿರುದ್ಧದ 'ಅವಿಶ್ವಾಸ' ಗೊತ್ತುವಳಿ ಪ್ರಸ್ತಾವನೆ ಚರ್ಚೆ ಕೈಗೆತ್ತಿಕೊಳ್ಳಲು ಬಿಜೆಪಿ ಪಟ್ಟು ಹಿಡಿದರೆ, ಕಾರ್ಯಕಲಾಪ ಪಟ್ಟಿಯಂತೆ ಗೋಹತ್ಯೆ ನಿಷೇಧ ಮಸೂದೆ ಚರ್ಚಿಸಲು ಪ್ರತಿಪಕ್ಷ ಕಾಂಗ್ರೆಸ್ ಬಿಗಿಪಟ್ಟು ಹಿಡಿಯಿತು. ಕಾನೂನು ತಜ್ಞರ ಜತೆ ಚರ್ಚಿಸಿ ಅವಿಶ್ವಾಸದ ವಿಷಯ ಕಲಾಪ ಪಟ್ಟಿಗೆ ಸೇರಿಸುವ ದಿನಾಂಕ ನಿರ್ಧರಿಸುವೆ ಎಂದು ಸಭಾಪತಿ ಸಮಜಾಯಿಷಿ ನೀಡಿದರು. ಮನವಿ ಸಲ್ಲಿಸಿ 14 ದಿನಗಳಾಗಿದೆ. ನಿಯಮದ ಪ್ರಕಾರ, ಅವಿಶ್ವಾಸ ನಿರ್ಣಯ ಚರ್ಚಿಸಬೇಕೆಂಬ ಬಿಜೆಪಿ ವಾದವನ್ನು ಪ್ರತಿಪಕ್ಷದ ವಿರೋಧಿಸಿತು. ಇದರಿಂದಾಗಿ ವಾಗ್ವಾದ, ಗದ್ದಲ ಉಂಟಾಯಿತು. ಈ ಮಧ್ಯೆಯೇ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ ಎಂದು ಸಭಾಪತಿ ಪಕಟಿಸಿಬಿಟ್ಟರು. ತಕ್ಷಣವೇ ರಾಜ್ಯಪಾಲರಿಗೆ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಹಾಗೂ ಸರ್ಕಾರದ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ ಭೇಟಿಯಾಗಿ ಪರಿಷತ್‌ನ ವಿದ್ಯಮಾನ ವಿವರಿಸಿ, ಬಿಜೆಪಿ ಸದಸ್ಯರ ನಿಯೋಗದ ಭೇಟಿಗೆ ಶುಕ್ರವಾರ ಕಾಲಾವಕಾಶ ಪಡೆದುಕೊಂಡಿದ್ದರು. ನಿಯೋಗದಲ್ಲಿ ಆಯನೂರು ಮಂಜುನಾಥ್, ಅರುಣ್ ಶಹಾಪುರ, ಡಾ.ತೇಜಸ್ವಿನಿಗೌಡ ಹಾಗೂ ಎನ್.ರವಿಕುಮಾರ್ ಇದ್ದರು.

**ಸಭಾಪತಿ ವಿರುದ್ಧ ದೂರು:** ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ನೇತೃತ್ವದ ನಿಯೋಗವು ಶುಕ್ರವಾರ ರಾಜಭವನಕ್ಕೆ ತೆರಳಿ, ಸಭಾಪತಿ ವಿರುದ್ಧ ದೂರು ಸಲ್ಲಿಸಿದೆ. ವಿಧಾನಪರಿಷತ್‌ನ ಕಲಾಪ ಸಲಹಾ ಸಮಿತಿ ನಿರ್ಣಯದ ಪ್ರಕಾರ, ಡಿ.15ರವರೆಗೆ ಅಧಿವೇಶನ ನಡೆಸಬೇಕೆಂದಾಗಿತ್ತು. ಈ ವಿಷಯ ನಡವಳಿಯಲ್ಲಿ ಉಲ್ಲೇಖವಾಗಿದೆ. ಆದರೆ ಸಭಾಪತಿ ತಮ್ಮದೇ ಆದ ಕಾರಣಕ್ಕೆ ಸರ್ಕಾರದ ಭಾವನೆಗಳನ್ನು ಕಡೆಗಣಿಸಿ ಅಧಿವೇಶನವನ್ನು ಹಠಾತ್ತನೆ ಅನಿರ್ದಿಷ್ಟಾವಧಿವರೆಗೆ ಮುಂದೂಡಿದ್ದಾರೆ. ಮಂಗಳ ವಾರ ಒಂದು ದಿನದಮಟ್ಟಿಗೆ ವಿಧಾನಪರಿಷತ್ ಅಧಿವೇಶನ ಕರೆಯಲು ಸೂಚಿಸಿ ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಮೊರೆಯಿಟ್ಟಿದೆ. ಮನವಿ ಆಲಿಸಿದ ರಾಜ್ಯಪಾಲ ವಜುಭಾಯಿ ವಾಲಾ, ಈ ಕುರಿತು ಕಾನೂನು ತಜ್ಞರ ಜತೆಗೆ ಚರ್ಚಿಸಿ ಸಲಹೆ ಪಡೆದು ಸೂಕ್ತ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ಕೋಟ ಶ್ರೀನಿವಾಸ ಪೂಜಾರಿ 'ವಿಜಯವಾಣಿ'ಗೆ ತಿಳಿಸಿದರು.

**ವಿಧಾನಪರಿಷತ್ ಅಧಿವೇಶನವನ್ನು ಬುಧವಾರದವರೆಗೆ ನಡೆಸುವುದಕ್ಕೆ ಸಭಾಪತಿ ಸಮಕ್ಷಮವೇ ಕಲಾಪ**



**ಸಲಹಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಆದರೂ ಸಭಾಪತಿಯವರು ಹಠಾತ್ ಮುಂದೂಡಿದ್ದು, ಅಂತಹ ಅಧಿಕಾರ ಅವರಿಗೆ ಇಲ್ಲ. ಈ ಹಿನ್ನೆಲೆಯಲ್ಲಿ ಮಂಗಳವಾರ ಅಧಿವೇಶನ ನಡೆಸುವುದಕ್ಕೆ ಸರ್ಕಾರ ತೀರ್ಮಾನಿಸಿದೆ. ಜತೆಗೆ ರಾಜ್ಯಪಾಲರಿಗೂ ಮನವಿ ಮಾಡಿಕೊಳ್ಳಲಾಗಿದೆ.**

| **ಬಿ.ಎಸ್.ಯಡಿಯೂರಪ್ಪ** ಮುಖ್ಯಮಂತ್ರಿ

### ಸಿಎಂಗೇ ಗೊತ್ತಿಲ್ಲದೆ ವಿಧೇಯಕ ಮಂಡನೆ

**ಬೆಂಗಳೂರು:** 'ಸಿಎಂ ನಾಟ್ ಇನ್ ಪೊಸಿಷನ್' ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮಾರ್ಮಿಕವಾಗಿ ನುಡಿದರು. 'ಗೋಹತ್ಯೆ ನಿಷೇಧ ವಿಧೇಯಕ ಪರಿಷತ್‌ನಲ್ಲಿ ಅನುಮೋದನೆ ಪಡೆದುಕೊಳ್ಳದ ಹಿನ್ನೆಲೆ ಮತ್ತೆ ಒಂದು ದಿನ ವಿಶೇಷ ಅಧಿವೇಶನ



ಕರೆಯಲು ಸರ್ಕಾರ ಸಿದ್ಧತೆ ನಡೆಸಿದೆಯಲ್ಲ' ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಿದ್ದರಾಮಯ್ಯ, ಸಿಎಂಗೆ ಏನೂ ವಿಷಯ ಗೊತ್ತಿರಲಿಲ್ಲ. ಬೇರೆಯವರು ನಿರ್ಧಾರ ಮಾಡಿರುತ್ತಾರೆ. ಎರಡು ದಿನದ ಹಿಂದೆ ವಿಧಾನಸಭೆಯಲ್ಲಿ ಪೂರಕ ಅಂದಾಜು ಚರ್ಚೆ ವೇಳೆ ಉತ್ತರ ಹೇಳಲು ಅವರಿಗೆ ಸಾಧ್ಯ ಆಗಲಿಲ್ಲ, ಯಾವ ರೀತಿ ಉತ್ತರ ನೀಡಿದರೆಂದು ಗೊತ್ತಿದೆ ಎಂದರು. ಅವರಿಗೆ ಏನಾದರೂ ಕೇಳುತ್ತಾ? ಅವರಿಗೆ ಸಹಾಯ ಮಾಡಲು ಯಾರಾದರೂ ಒಬ್ಬರು ಬೇಕಾಗುತ್ತದೆ ಎಂದು ಕುಟುಕಿದ್ದಾರೆ. ಅಲ್ಲೇ ಇದ್ದ ಕಾಂಗ್ರೆಸ್‌ನ ಕೆಲ ಶಾಸಕರು ಸಿದ್ದರಾಮಯ್ಯ ಅಭಿಪ್ರಾಯಕ್ಕೆ ದನಿ ಗೂಡಿಸಿದರು.